# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ

# ಯೇಸು ದೊಡ್ಡ ಬೋಧಕನಾಗಿದ್ದನು



ಬರಹಗಾರರು: Edward Hughes
ಚಿತ್ರಲೇಖಕರು: Byron Unger; Lazarus
ಅಳವಡಿಸುವವರು: E. Frischbutter; Sarah S.
ಪದ್ಮಾ ಸೈಲೇಸ್: Vinay Shirol
ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada

©2015 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.



ಯೇಸು ಒಬ್ಬ ಅತ್ಯುತ್ತಮ
ಬೋಧಕನಾಗಿದ್ದನು–ಯಾವಾಗಲು
ಅತ್ಯುತ್ತಮ. ಜನರು ಆತನ
ಬೋಧನೆಯನ್ನು ಕೇಳಿಸಿಕೊಂಡರು.



ಆತನು ಅವರಿಗೆ ದಯೆ ತೋರಿಸುವವರಾಗಿಯೂ, ಒಳ್ಳೇಯವರಾಗಿಯೂ ಇರುವಂತೆ ಬೋಧಿಸಿದನು. ಅನೇಕರು ಅವರನ್ನು ಹಿಂಸಿಸಬಹುದು. ಆದರೆ ದೇವರು ಅವರಿಗೆ ಸಹಾಯ ಮಾಡುವವನಾಗಿದ್ದಾನೆ.



ಯೇಸು ಅನೇಕ
ಸಂಗತಿಗಳನ್ನು ಕಲಿಸಿದನು.
ಮನೆಯಲ್ಲಿ ದೀಪ ಹೇಗೆ
ಬೆಳಕನ್ನು ಕೊಡುತ್ತದೋ
ಹಾಗೆಯೇ ದೇವರ ಮಕ್ಕಳು
ಲೋಕಕ್ಕೆ ಬೆಳಕನ್ನು
ಕೊಡುತ್ತಾರೆ. ಒಂದು
ದೀಪವೂ ಕತ್ತಲೆಯ
ಕೋಣೆಯಲ್ಲಿ ದೊಡ್ಡ
ಬದಲಾವಣೆಯನ್ನು
ತರುತ್ತದೆ.

ಯೇಸು ಸಹ ಸೇಡು ತಿರಿಸಿಕೊಳ್ಳುವುದನ್ನು ನಂಬುತ್ತಾನೆ' ಎಂದು ಜನರು ಅಂದುಕೊಂಡಿದ್ದರು, ಅಂದರೆ "ಕಣ್ಣಿಗೆ ಕಣ್ಣು ಹಲ್ಲಿಗೆ ಹಲ್ಲು" ತೆಗೆಸುವುದು. ಆದರೆ ಯೇಸು ಅವರಿಗೆ ದಯೇ, ಕ್ಷಮಾಪನೆ, ಪ್ರೀತಿ ಮತ್ತು ವೈರಿಗಳನ್ನು ಪ್ರೀತಿಸುವುದನ್ನು ಕಲಿಸಿದನು.




ಯೇಸುವಿನ ಕಾಲದಲ್ಲಿ ಅನೇಕ ಜನರು ತಾವು ತುಂಬಾ ಪರಿಶುದ್ಧರು ಎಂದು ತೋರಿಸುತ್ತಿದ್ದರು. ಒಂದು ವೇಳೆ ಅವರು ಯಾವ ಭೀಕ್ಷುಕನಿಗೆ ಏನಾದರು ಸಹಾಯ ಮಾಡಿದರೆ ಅದು ಎಲ್ಲರಿಗೂ ಗೋತ್ತಾಗುವಂತೆ ಕೂಗಲು ಅನೇಕ ಜನರು ಅವರೋಂದಿಗಿರುತ್ತಿದ್ದರು. "ಯಾರಿಗೂ ಗೊತ್ತಾಗದಂತೆ ಕೊಡಿರಿ ಆಗ ದೇವರು ನಿಮ್ಮನ್ನು ಗೌರವಿಸುತ್ತಾನೆ" ಎಂದು ಯೇಸು ಹೇಳಿದನು.

ಯೇಸು ಪ್ರಾರ್ಥನೆಯ ಬಗ್ಗೆ ಬೋಧಿಸಿದನು. ಜನರು ನೋಡಬೇಕೆಂದು ಸಭಾ ಮಂದಿರಗಳಲ್ಲಿಯೂ ಬೀದಿ ಚೌಕಗಳಲ್ಲಿಯೂ ನಿಂತುಕೊಂಡು ಪ್ರಾರ್ಥನೆ ಮಾಡುವುದಕ್ಕೆ ಬಯಸುತ್ತಾರೆ. ಅವರು ದೇವರ ಬಗ್ಗೆ ನಿರ್ಲಕ್ಷ ಮಾಡಿದರು.



ದೇವರು ಅವರ ಬಗ್ಗೆ ಏನು
ಅಂದುಕೊಂಡಿದ್ದಾನೆ ಅನ್ನುವುದಕ್ಕಿಂತ ಜನರು
ಅವರ ಬಗ್ಗೆ ಏನು ಅಂದುಕೊಂಡಿದ್ದಾರೆಂಬುದು
ಅವರಿಗೆ ಮಹತ್ವವಾಗಿತ್ತು. ಯೇಸು ಅವರನ್ನು
ಕಪಟಿಗಳು–ನಟಿಸುವವರು ಎಂದು ಕರೆದನು.



ಯೇಸು ಪರಿಸರವನ್ನು ಉಪಯೋಗಿಸಿ ತನ್ನ ಬೋದನೆಗಳನ್ನು ವಿವರಿಸಿದನು. ಉದಾಹರನೆಗೆ, ಹಕ್ಕಿಗಳನ್ನು ತೋರಿಸಿದನು. "ನಿಮ್ಮ ತಂದೆಯು ಹಕ್ಕಿಗಳಿಗೆ ಆಹಾರವನ್ನು ಒದಗಿಸುತ್ತಾನೆ, ಚಿಂತೆಮಾಡಬೇಡಿರಿ, ಹಾಗೆಯೇ ನಿಮಗೂ ಸಹ ಒದಗಿಸುತ್ತಾನೆ" ಎಂದು ಹೇಳಿದನು.



ಅಡವಿಯ ಹೂಗಳಿಗಿರುವ ಅಂದ ಚವೆಂದವು ಶ್ರೀಮಂತ ಅರಸನಾದ ಸೋಲೋಮೋನನಿಗೂ ಎಂದು ಹೇಳಿ- "ದೇವರು ಅಡವಿಯ ಹುಲ್ಲಿಗೆ ಉಡಿಸಿದರೆ, ಅದಕ್ಕಿಂತಲೂ ಏಷ್ಟೋ ಹೆಚ್ಚಾಗಿರುವ ನಿಮಗೆ ಉಡಿಸಿ ತೋಡಿಸುವುದಿಲ್ಲವೋ"? ಎಂದು ಯೇಸು ತನ್ನ ಬೋಧನೆಯಿಂದ ಜನರಿಗೆ ತಮ್ಮ ಅಗತ್ಯತೆಗಳಿಗೆ ಹೆಚ್ಚಾಗಿ ದೇವರನ್ನು ಆತುಕೊಳ್ಳಲು ಬೋಧಿಸಿದನು.



ನಿನ್ನ ಸಹೋದರನ್ನು ತೀರ್ಪುಮಾಡಬೇಡ,
ಹಾಗೆ ಮಾಡಿದರೆ ನೀನು ನೀನ್ನ ಕಣ್ಣೀನಲ್ಲಿರುವ
ತೂಲೆಯನ್ನು ಯೋಚಿಸದೆ ನೀನ್ನ
ಸಹೋದರನ ಕಣ್ಣಿನಲ್ಲಿರುವ
ರವೆಯನ್ನು ಯೋಚಿಸುವಂತೆ
ಎಂದು ಯೇಸು ಹೇಳಿದನು
ಜನರು ಇದನ್ನು ಕೇಳಿ
ತಮ್ಮೊಳಗೆ ನಕ್ಕಿರಬಹುದು
ಆದರೆ ಅವರು ಯೇಸು
ಹೇಳಿದ ಅರ್ಥವನ್ನು
ಯೋಚಿಸಬೇಕು.





"ಜನರು ದೇವರಿಂದ ಸಹಾಯ ಕೇಳಬೇಕೆಂದು" ಯೇಸು ಹೇಳಿದನು ಇಹ ಲೋಕದ ತಂದೆಗಳಾದ ನೀವು ನಿಮ್ಮಲ್ಲಿ ಯಾವನಾದರು ರೊಟ್ಟಿ ಕೇಳುವ ಮಗನಿಗೆ ಕಲ್ಲನ್ನು ಕೊಡುವನೇ? ಇಲ್ಲ! ಅವನು ಒಳ್ಳೆಯ ಪದಾರ್ಥಗಳನ್ನು ಕೊಡುತ್ತಾರೆ. ಹಾಗೆಯೇ ಯಾರಾರು ಕೇಳಿಕೊಳ್ಳುತ್ತಾರೋ ಅವರಿಗೆ ದೇವರು ಒಳ್ಳೆಯ ಪದಾರ್ಥವನ್ನು ಕೊಡುವನು.

ಉನ್ನತ ಭೋದಕನಾದ ಯೇಸು ಸುಳ್ಳು ಪ್ರವಾದಿಗಳ ಬಗ್ಗೆ ಎಚ್ಚರಿಸಿದನು, "ತೋಳಗಳಾದ ಅವರು ಕುರಿಯ ವೇಶ ಧರಿಸಿಕೊಂಡು ಕುರಿಯ ಮಧ್ಯದಲ್ಲೆ ಇರುತ್ತಾರೆ ಅಂದನು ಅವರು ಜೀವಿಸಿದ ಜೀವನದಿಂದ ಸುಳ್ಳು ಬೋದಕರನ್ನು ಗುರುತಿಸಬಹುದು ಎಂದು ಯೇಸು ಹೇಳಿದನು.



ಯೇಸು ಒಂದು ಕಥೆಯನ್ನು ಹೇಳಿ ಹೀಗೆ ಮನವದಿಕೆ ಮಾಡಿದನು ಹೇಗೆಂದರೆ,
ಯಾರಾರು ದೇವರ ಮಾತನ್ನು ಕೇಳಿ ಅದರಂತೆ ನಡೆಯುತ್ತಾರೋ
ಅಂಥವರು ಬಂಡೆಯ ಮೇಲೆ ಕಟ್ಟುದ
ಮನೆಯ ಹಾಗಿರುವರು, ಅದಕ್ಕೆ
ಬಿರುಸಾದ ಗಾಳಿಯೂ
ಬಂದು ಅಪ್ಪಳಿಸಿದರೂ
ದೃಢವಾಗಿ ನಿಂತಿತು.



ಆದರೆ ಒಬ್ಬ ಮೂರ್ಖನು ಮರಳಿನ ಮೇಲೆ ಮನೆಯನ್ನು ಕಟ್ಟಿದನು. ಅದಕ್ಕೆ ದೊಡ್ಡ ಬಿರುಗಾಳಿ ಅಪ್ಪಳಿಸಿದಾಗ, ಅದರ ಅಸ್ತಿವಾರವು ಗಟ್ಟಿಯಾಗಿಲ್ಲದ್ದರಿಂದ ಕೆಳಕ್ಕೆ ಬಿದ್ದಿತು. ಯಾರಾರು ದೇವರ ವಾಕ್ಯವನ್ನು ಕೇಳಿ ಅದರಂತೆ ನಡೆಯವುದಿಲ್ಲವೋ ಅಂಥವರು ಈ ಮೂರ್ಖನ ಹಾಗೆ ಎಂದು ಯೇಸು ಹೇಳಿದನು.



ಯೇಸುವಿನ ಮಾತನ್ನು ಕೇಳಿ ಜನರು ಆಶ್ಚರ್ಯಪಟ್ಟರು. ಇಂತಹ ಮಾತುಗಳನ್ನು ಅವರು ಹಿಂದೆ ಎಂದು ಕೇಳಿರಲಿಲ್ಲ. ಬರಿ ದೇವರ ವಾಕ್ಯವನ್ನು ಕೇಳುವುದಷ್ಟೆ ಅಲ್ಲ ಆದರೆ ಅದನ್ನು ಪ್ರತಿದಿನವೂ ಪರಿಪಾಲಿಸಬೇಕು ಎಂದು ಅವರಿಗೆ ಗೊತ್ತಾಯಿತು.



# ಯೇಸು ದೊಡ್ಡ ಬೋಧಕನಾಗಿದ್ದನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**ಮತ್ತಾಯ 5–7, ಲೂಕ 6**

**“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”**
**ಕೀರ್ತನೆ 119:130**

# ಮುಕ್ತಾಯ

42

60

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16